ದಿಃ 13-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ. ಎ ಸಿ ಕೆ ವಕೀಲರಿಂದಃ**

ಸಾಕ್ಷಿಗೆ ಮರಾಠಿ ಭಾಷೆ ಬಿಟ್ಟು ಬೇರೆ ಭಾಷೆ ಬರದ ಕಾರಣ ಶ್ರೀ ಎಂ ಎನ ಎನ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೋದಿಸಲಾಯಿತು.

ನನಗೆ ಎರಡು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. 2007 ರಲ್ಲಿ ನನ್ನ ಮೊದಲು ಮಗಳು ಜನಿಸಿರುತ್ತಾಳೆ ಎಂದರೆ ಸಾಕ್ಷಿಯೂ 1999 ರಲ್ಲಿ ಜನಿಸಿರುತ್ತಾಳೆ ಎಂದು ಹೇಳುತ್ತಾರೆ. 2008 ರಲ್ಲಿ ನನ್ನ ಮಗಳು ಪೂಜಾಳನ್ನು ಹಾರ್ಟ ಆಪರೇಷನ ಸಲುವಾಗಿ ಬಾಂಬೇಗೆ ದಾಖಲಿಸಿದ್ದೇವು ಎಂದರೆ ಸರಿ. ಪ್ರತಿವಾದಿ ನಂಬರ 4 ಆಸ್ಪತ್ರೆಗೆ ಬಂದಿದ್ದ ಎಂದರೆ ಸರಿ. ಅಲ್ಲಿ ಆತ ಏಂಟು ದಿವಸ ಇದ್ದ ಎಂದರೆ ಸಾಕ್ಷಿಯೂ ಎರಡು ದಿವಸ ಇದ್ದ ಎಂದು ಹೇಳುತ್ತಾರೆ. ಸರ್ವೆ ನಂಬರ 70/32 ಮತ್ತು ಸರ್ವೆ ನಂಬರ 19ಕ್ಕೆ ಸಂಬಂಪಟ್ಟಂತೆ ಡಿ ಸಿ ನ್ಯಾಯಾಲಯದಲ್ಲಿ ಪ್ರಕರಣ ಇದೆ ಎಂದು ಆತ ನನಗೆ ಹೇಳಿ ವಾಪಸ ಬಂದಿರುತ್ತಾನೆ ಎಂದರೆ ಸಾಕ್ಷಿಯೂ ಕೆಲಸ ಇದೆ ಎಂದು ಹೇಳಿ ವಾಪಸ ಬಂದಿರುತ್ತಾನೆ ಎಂದು ಹೇಳುತ್ತಾರೆ. ಜಮೀನಿನ ಕೆಲಸ ಇದೆ ಎಂದು ಹೇಳಿ ವಾಪಸ ಬಂದಿರುತ್ತಾನೆ. ಜಮೀನಿನ ಯಾವ ಕೆಲಸ ಇತ್ತು ಎಂದು ಹೇಳಿರಲಿಲ್ಲ. ಆತ ಜಿಲ್ಲಾಧಿಕಾರಿ ನ್ಯಾಯಾಲಯದ ಪ್ರಕರಣದಲ್ಲಿ ಹಾಜರು ಆಗಬೇಕು ಎಂದು ಹೇಳಿ ಬಂದಿರುತ್ತಾನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯ ಟೆನ್ಶನ್‌ನಲ್ಲಿ ಇದ್ದೆ ಏನೂ ಹೇಳಿದ್ದ ಎಂದು ನಿಖರವಾಗಿ

ಹೇಳಲು ನೆನಪಿಲ್ಲ. ನನ್ನ ಹೆಸರಿನ್ನು ದಾಖಲಿಸಲು ಕಬೂಲಿ ಪತ್ರ ಬರೆದು ಕೊಟ್ಟಿದ್ದೇವೆ ಎಂದು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಕಾಣಿಸಲು ತೊಂದರೆ ಇರಲಿಲ್ಲ. ಪ್ರತಿವಾದಿ ನಂಬರ 1 ಮತ್ತು 4 ರವರು ಏನೂ ತಕರಾರು ಸಲ್ಲಿಸಿದ್ದಾರ ಮತ್ತು ಯಾವ ದಾಖಲೆ ಹಾಜರು ಪಡಿಸಿದ್ದಾರೆ ಎಂದು ಗೊತ್ತಿಲ್ಲ. ವಕೀಲರ ಮುಖಾಂತರ ತಿಳಿದು ಕೊಳ್ಳಲು ತೊಂದರೆ ಇರಲಿಲ್ಲ .

2002 ರಲ್ಲಿ ಆ ವಿಭಾಗದಂತೆ ಪ್ರತಿವಾದಿ ನಂಬರ 2 ಮತ್ತ 4 ರವರು ತಮಗೆ ಬಂದ ಹಿಸ್ಸೆಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 2 ಮತ್ತು 4 ರವರು ಪ್ರತ್ಯೇಕ ಹಿಸ್ಸೆಗಳ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸರ್ವೇ ನಂಬರ 120/5 ಬಿ ಆಸ್ತಿಯನ್ನು 4 ನೇ ಪ್ರತಿವಾದಿ ಅಪ್ಪಾಸಾಹೇಬ ಭೀಮಪ್ಪಾ ಚೌಗುಲಾ ರವರ ಬಳಿಯಿಂದ ಖರೀದಿ ಹಿಡಿದಿದ್ದಾರೆ ಎಂದರೆ ಸರಿ. 2010 ರಲ್ಲಿ ಆತ ತನ್ನ ಸ್ವಂತ ಆದಾಯ ದಿಂದ ಖರೀದಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರದಂತೆ 4ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿದೆ ಎಂದರೆ ಸರಿ. 2010ರ ಕ್ರಯ ಪತ್ರಕ್ಕೆ ನಾನು ಎಷ್ಟು ಹಣ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯೂ ನಿಖರವಾದ ಉತ್ತರ ನೀಡಿರುವುದಿಲ್ಲ. 4 ನೇ ಪ್ರತಿವಾದಿ ಜಮೀನು ಖರೀದಿಸಿದ ನಂತರ ನಾನು ಮತ್ತು 3 ನೇ ಪ್ರತಿವಾದಿ ಆತನ ಜಮೀನಗೆ ಬುತ್ತಿ ತೆಗೆದುಕೊಂಡು ಪೂಜೆ ಮಾಡಲು ಬಂದಿದ್ದೇವು ಎಂದರೆ ಬೋರವೆಲ್ ಪೂಜೆ ಮಾಡಲು

ಬಂದಿದ್ದೇವು ಎಂದು ಹೇಳುತ್ತಾರೆ. ಆತ ಜಮೀನು ಖರೀದಿಸಿದ ಬಗ್ಗೆ ಮತ್ತು ಬೋರವೆಲ್ ಹಾಕಿದ ಬಗ್ಗೆ ನಮಗೆ ಹೇಳಿದ್ದ ಆದ್ದರಿಂದ ನಾವು ಬಂದಿದ್ದೇವು ಎಂದು ಹೇಳುತ್ತಾರೆ. 2 ನೇ ಏನೂ ತಕರಾರ ಹಾಕಿದ್ದಾರೆ ಎಂದು ಅವರಿಗೆ ಗೊತ್ತು. ನಾನು ಪ್ರತಿ ಮುದ್ದತಿಗೆ ಆತನ ಜೊತೆಗೆ ನ್ಯಾಯಾಲಯಕ್ಕೆ ಬರುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಇಬ್ಬರು ಜನ ಕೂಡಿ ಬರುತ್ತೇವೆ ಎಂದರೆ ಸರಿಯಲ್ಲ. ಆದರೆ ನಾವು ಇಬ್ಬರು ಜನ ಮಾಡನಾಡುತ್ತೇವೆ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಮುಂದೂವರೆದ ಪಾಟೀ ಸವಾಲು ಮೂಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ

(ಸಾಕ್ಷಿಗೆ ಕನ್ನಡದಲ್ಲಿ ಕೇಳಿದ ಪ್ರಶ್ನೇಗಳನ್ನು ಮರಾಠಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಮಾರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥವತ್ತಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ